


ಗುಡಿಸಿಹಾಕಿಬಿಡುತ್ತಾಳೋ ಎಂಬ ಭಯ. ಆ ರಾಕ್ಷಸಿಯ ದಾರಿಯಿಂದ ದೂರವಿರಬೇಕೆಂದೇ ಜನರು ಕಿಟಕಿ ಬಾಗಿಲುಗಳನ್ನು ಮುಚ್ಚಿದರು.

ಬಹುಬೇಗ ಶ್ಯಾಮಬಂಧು ಅವರ ಹೆಂಡತಿಗೂ ತಾಯಿಗೂ ಯೋಚನೆಗಿಟ್ಟುಕೊಂಡಿತು. ರೇವತಿ ನೆರವಿಗಾಗಿ ಅಳುತ್ತಾ ಮನೆಯೊಳಗೂ ಹೊರಗೂ ಓಡಾಡಿದಳು. ಸುದ್ದಿ ವಾಸುವಿಗೆ ಮುಟ್ಟಿದ್ದೇ ಅವನು ಓಡಿಬಂದವನು ತನ್ನ ಜೀವದ ಬಗ್ಗೆ ಒಂದಿಷ್ಟೂ ಯೋಚಿಸದೆ ಶ್ಯಾಮಬಂಧುವಿನ ಪಕ್ಕದಲ್ಲಿ ಕುಳಿತು ಅವರ ಕೈ ಕಾಲುಗಳನ್ನು ಉಜ್ಜತೊಡಗಿದ; ಅವರ ಬತ್ತಿದ ತುಟಿಗಳ ನಡುವೆ ನೀರು ಹನಿಸಿದ.

ಮೂರು ಗಂಟೆ ಕಳೆಯಿತು.

ಶ್ಯಾಮಬಂಧು ಇದ್ದಕ್ಕಿದ್ದಂತೆ ಕಣ್ಣುಬಿಟ್ಟವರು ವಾಸುವನ್ನು ನೋಡುತ್ತಾ, 'ನಮ್ಮ ಸಂಸಾರ ನಿನ್ನ ಕೈಯಲ್ಲಿದೆ. ಅವರನ್ನು ನೋಡಿಕೊಳ್ಳುವ ಭಾರ ನಿನ್ನದು' ಎಂದು ತೊದಲಿದರು.

ವಾಸುವಿಗೆ ಕಣ್ಣೀರನ್ನು ತಡೆದುಕೊಳ್ಳಲಾಗಲಿಲ್ಲ.

ಶ್ಯಾಮಬಂಧು ಆವತ್ತು ಸಾಯಂಕಾಲ ನಿಧನರಾದರು.